ಅಪ್ಪನಿಗೆ ಸ್ವಾಗತಿಸಿದ ಹತ್ತಾರು ಸನ್ಮಾನ, ಉದ್ಘಾಟನೆಗೊ, ಪ್ರವಚನ ಕಾರ್ಯಕ್ರಮಕ್ಕೊ ತಾನೇ ಅತಿಥಿಯಾಗಿ ಹೋಗದು, ಬರೋದು, ಭಾಗಿಯಾಗೋದು, ದಾಸೋಹ ಕಾರ್ಯಕ್ರಮ ನಡಿಸಿಕೊಡುವುದು ಲೀಲಾಜಾಲವಾಗಿ ರೂಢಿಮಾಡಿಕೊಂಡಿದ್ದ.



ಭಕ್ತಾದಿಗಳು ಹೊಳಿಯಾಚೆಗೆ ಜಾಸ್ತಿ ಇರುವುದರಿಂದ ತಂದೆಮಗ ಹೊಳಿಕಡೆ ಊರುಗಳಿಗೆ ಹೋಗೋದು, ಬರೋದು ಜಾಸ್ತಿ ಮಾಡಿದ್ರು. ಹಂಗೆ ತಮ್ಮೂರು ಗೌಡ್ರು ಹೊಳಿಯಾಚೆಗಿನ ಮ್ಯಾಳೂರು ಗೌಡ್ರು ಜತೆ ಬೀಗುಸ್ತಾನ ಮಾಡಿಕೊಂಡಿದ್ರು. ಇಂಥ ಸಂಬಂಧವನ್ನು ಮೊದಲೇ ಕುದ್ರಿಸಿದ್ದು ದಾನಪ್ಪನಿಂದಲೇ ಆಗಿತ್ತು. ಆದ್ದರಿಂದ ತಮ್ಮೂರು ಗೌಡನ ಮಗಳು ಅಂಜು ಹೊಳಿಕಡೆ ಗೌಡ್ರು ಮನೆಲಿ ಸಣ್ಣಾಕಿ ಇದ್ದಾಗಿನಿಂದಲೇ 'ನಮ್ಮೂರು ನೆಟ್ಟಗಿಲ್ಲ ಕಳ್ಳಕಾಕರು, ಕೊಲೆಗಡುಕರು ಜಾಸ್ತಿ ಅಲ್ಲೇ ಬೆಳಿಲಿ..' ಅಂತ ಮಾಟೂರಲ್ಲಿ ಬಿಟ್ಟಿದ್ರು. ದಾನಪ್ಪ ಅಂಜು ಇರುವ ಮನೆಲಿ ಹೇಳಿಕಿ ಹೇಳಲು, ಮಾತಾಡಿಸಲೆಂದು ಸುಮಾರು ವರ್ಷಗಳಿಂದ ವಹಿವಾಟು ಇಟ್ಟುಕೊಂಡೇ ಬಂದಿದ್ದ. ಕೆಲವೊಂದು ಸಲ ಬೀರನನ್ನು ಕರಕೊಂಡು ಹೋಗಿಬರೋದು ಮಾಡಿದ್ದ. ಹಿಂಗ ಹೋಗಿಬರೋದು ಸುಮಾರು ಹತ್ತನ್ನೆರಡು ವರ್ಷ ಮಾಡಿದ್ದರಿಂದ ಬೀರನಿಗೂ ಅಂಜುವಿಗೆ ಮೆಲ್ಲಕ ಒಂದೇ ಊರೋರಂತ ಮೊದಮೊದಲು ಸ್ನೇಹವಾಗಿ ಮೆಲ್ಲಕ ಕಾಲ ನೂಕಿದಂತೆ ಇಬ್ಬರಲ್ಲಿ ಹರೆಯದ ಪ್ರೇಮವೂ ಅಂಕುರಿಸತೊಡಗಿತ್ತು. ದಾನಪ್ಪ ದೇವ್ರು ಹೆಸರಿನಮ್ಯಾಲ ದಿನಕ್ಕಿಷ್ಟು ಪ್ರಸಿದ್ಧಿ ಪಡೆದುಕೊಂಡಂತೆ ಬೀರ ಮತ್ತು ಅಂಜುವಿನಲ್ಲಿ ಪ್ರೇಮವೂ ಒಳಗೊಳಗ ಗಾಢವಾಗಿ ಬೆಳೆದು ನಿಲುಕದಷ್ಟಾಗಿತ್ತು. ಬೀರ ಯಾವತ್ತೋ ಓದೊದು, ಬರಿಯೋದು ಬಿಟ್ಟಂತೆ ಅಪ್ಪನ ದೇವ್ರು ಗುಂಗುನೂ ಬಿಟ್ಟು ಅಂಜುವಿನ ಗುಂಗಿನಲ್ಲಿರಲು ಮುಂದಾಗಿದ್ದ. ಮ್ಯಾಳೂರು ಹೊಳೆದಂಡಿ ಬಗಲ ಕಾಲೇಜು ಓದುತಿದ್ದ ಅಂಜು ಬೀರನ ಜತಿಗೆ ಇರಲು ಇಚ್ಚಿಸತೊಡಗಿದ್ದು. ಇಬ್ಬರೂ ಹೊಳಿದಂಡಿಯ ಸಣ್ಣ ಉಸುಕಿನ್ಯಾಗ ಕೂಡಿ ಉಳ್ಯಾಡಿದ್ದು ಒಂದೆರೆಡು ಸಲವಲ್ಲ. ಲೆಕ್ಕವೂ ತಪ್ಪಿದ್ದವು. ಸುತ್ತಲ ಊರುಗಳ ಮಂದಿ, ಪರಿಚಯಸ್ತು ನೋಡಿನೂ ನೋಡದವರಂತೆ ಇದ್ರು. ಯಾಕಂದ್ರ ಅಂಜು ಗೌಡ್ರು ಮಗಳಾದ್ರೆ, ಬೀರ ಪ್ರಸಿದ್ದ ಅಲೈದೇವ್ರು ಹಿಡಿಯುವ ದಾನಪ್ಪನ ಮಗನಾಗಿದ್ದ. ಹೀಗಾಗಿ ಇಬ್ಬರ ಬಗ್ಗೆ ಸಾಕಷ್ಟು ಗೊತ್ತಿತ್ತು. ನೋಡಿಯೂ ನೋಡದವರಂತೆ ದೊಡ್ಡವರ ಸುದ್ದಿ ನಮಗ್ಯಾಕಂತ ಒಳಗೊಳಗ ಗ್ರಾಮಗುಸ್ಸಿಯಂಗ ಸುಮ್ಮನಿದ್ರು. ಹಿಂಗ ಇವರಿಬ್ಬರ ಸುದ್ದಿ ಬಯಲಿಗೆ ಬೀಳದಿದ್ದಕ್ಕಾಗಿ ಇನ್ನಷ್ಟು ದಿನ ಹೊಳಿದಂಡಿಗೆ ತಾಸುಗಟ್ಲೆ ಗುಬ್ಬಚ್ಚಿ ಗೂಡು ಕಿತ್ತಿ, ಉಸುಕಿನ್ಯಾಗ ಗುಬ್ಬಿ ಮನಿಮಾಡಿ ಆಡುವುದು. ಕಪ್ಪಿಚಿಪ್ಪು, ಶಂಖ, ಉಜ್ಗಲ್ಲು ಚಿಟ್ಟಮೀನು, ಏಡಿ ಹಿಡಿದು ಹರಿಗೋಲು ಕಟ್ಟಿ ಹೊಳಿತುಂಬ ಆಡುವುದು. ದಂಡಿಮ್ಯಾಗಿದ್ದ ಹಣ್ಣುಹಂಪಲು ತಿಂದು, ಮಜ್ಜಿಗಿಯಂತ ಈಚಲಹೆಂಡ ಕುಡಿದು ತಣ್ಣನ ಉಸುಕಿನ್ಯಾಗ ಹಗಲೆಲ್ಲಾ ಮಲಗುವುದು ನಡೆದಿರುತಿತ್ತು. ಇಷ್ಟೆಲ್ಲಾ ಆದಮೇಲೆ ಕೊನಿಗೆ ಇವರ ಹುಡುಗಾಟವೆಲ್ಲಾ ಎರಡು ಮನಿಯವ್ರಿಗೆ ಮೆಲ್ಲಕ ಗೊತ್ತಾಯ್ತು. ಆದ್ರ ಗೌಡ ಹೇಗಾರಮಾಡಿ ಮಗಳನ ಬೀರನ ತಂಟಬಿಡಿಸಿ ಮಗಳನ ಬೇರೆಕಡೆ ಮದ್ವಿ ಮಾಡಲು ಒಳಗೊಳಗ ಪ್ಲಾನು ಹೂಡಲು ಮುಂದಾದ. ಈ ಟೈಮಲ್ಲಿ ದಾನಪ್ಪನ ಎದರು ಹಾಕಿಕೊಂಡ್ರೆ ಆತ ಹಾಕಿದ ಮಂತ್ರ,ಶಾಪಗಳಿಗೆ ಯಾರು ಉಳಿದಿಲ್ಲಂತ ಒಳ್ಗನ ಹೆದರಿ ತನ್ನ ಮಾಲು ತಾನು ನೆಟ್ಟಗ ಇಟ್ಟುಕೊಳ್ಳಲು ಮಗಳನ ಮ್ಯಾಳೂರಿಂದ ಕರೆಸಿಕೊಂಡು ಭದ್ರವಾಗಿ ಮನಿಯೊಳಗ ಸೇರಿಸಿಕೊಂಡು ಹಗಲನ್ನೆರಡು ತಾಸು ಮಗಳಕಡೆ ಗಮನ ಇಟ್ಟಿರುತಿದ್ದ.

ಈ ಸುದ್ದಿನೂ ರಶೀದಸಾಬನಿಗೆ ಗೊತ್ತಾಗಿ ಮೆಲ್ಲಕ ಗೌಡನ ಕಡೆ ಸಂಘ ಬೆಳೆಸಲು ಮುಂದಾದ. ಈ ಸುದ್ದಿ ದಾನಪ್ಪನಿಗೆ ಒಳಗೊಳಗ ಗೊತ್ತಾಗಿ ಬೀರನಿಗೆ ಒಂದಿಷ್ಟು